ಮಾಲ್‌ನಲ್ಲಿ ಹಾಕಿದ ರಿಯಾಯ್ತಿ ಸೇಲ್ ಅಲ್ಲವಲ್ಲಾ... ಅವಳು ಆ ಕುಟುಂಬದ ಹಿನ್ನೆಲೆಯನ್ನು ಹುಡುಕುತ್ತಾ ಹೋದಾಗ ಹುಡುಕುತ್ತಿದ್ದ ಬಳ್ಳಿಯು ಕಾಲಿಗೆ ತೊಡರಿದಂತಾಯಿತು. ಅವರು ಬೇರೆ ಯಾರೂ ಅಲ್ಲ ತಮ್ಮ ಹಳೆಯ ಸಂಬಂಧಿಗಳೆಂಬ ಅಂಶ ಅವಳಿಗೆ ಆನಂದದಾಯಕವಾಗಿತ್ತು. ತನ್ನ ಸೋದರ ಮಾವನ ಹೆಂಡತಿಯ ಅಕ್ಕನ ನಾದಿನಿಯ ಮಗ ಸಗೀರ್ ಎಂಬುವಾತನೇ ಆ ಹುಡುಗನ ತಂದೆ ಎಂಬುದು ಆಕೆಗೆ ತಿಳಿದು ಬಂದ ನಂತರ ಅವಳು ಹಗಲುಗನಸು ಕಾಣತೊಡಗಿದಳು.

ತಾನು ತೋರಿಸಿದ ವರನ ಸಂಬಂಧದಲ್ಲಿ ತನಗೆ ಒಂದಿಷ್ಟಾದರೂ ಕ್ರೆಡಿಟ್ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದ ಸಾದಿಕಾಗೆ ಆ ಬಾದರಾಯಣ ಸಂಬಂಧದ ದೆಸೆಯಿಂದ ಇರಿಸುಮುರಿಸು ಉಂಟಾದದ್ದು ಸುಳ್ಳೇನಲ್ಲ. ಆದರೂ ಗುಟ್ಟಾಗಿ ಇಬ್ಬರೂ ಸೇರಿ ಒಮ್ಮೆ ಮೈಸೂರಿಗೆ ಹೋಗೋಣವೆಂದು ತೀರ್ಮಾನಿಸಿದರು. ಹಾಗೂ ತಮ್ಮ ಶಾಲೆಯ ಮಕ್ಕಳನ್ನು ಮೈಸೂರಿಗೆ ಪ್ರವಾಸ ಕರೆದುಕೊಂಡು ಹೋಗುವ ಬಗ್ಗೆ ಪೂರ್ವಭಾವಿ ವ್ಯವಸ್ಥೆಯ ಸಲುವಾಗಿ ಅಲ್ಲಿಗೆ ಹೋಗಬೇಕಾಗಿದೆಯೆಂದು ನೆಪ ಹೇಳಿ ಅವರಿಬ್ಬರೂ ಬೆಳಗಿನ ಆರು ಗಂಟೆಯ ರೈಲನ್ನು ಹತ್ತಿದರು. ಹಾಗೂ ಆಸಿಫಾಳ ಮನೆಯನ್ನು ತಲುಪಿದಾಗ ಅಂತಹದೇ ಯಾವುದೋ ಒಂದು ನೆಪ ಸಿದ್ಧವಾಗಿತ್ತು. ಸಾದಿಕಾಳ ಮಧ್ಯಸ್ಥಿಕೆಯಲ್ಲಿ ಉಭಯತ್ರರ ಪರಿಚಯವಾಗಿ, ಅಲ್ಲಿಯೇ ಮಧ್ಯಾಹ್ನ ಊಟವೂ ಆದ ನಂತರ,ಉಭಯಕುಶಲೋಪರಿಯ ಸಂದರ್ಭದಲ್ಲಿ ಬೇಕೆಂತಲೇ ಅವರ ಹಿಂದಿನ ನೆಂಟಸ್ತನವನ್ನು ಬಿಚ್ಚಿಕೊಳ್ಳಲು ಸಾಕಷ್ಟು ಹುನ್ನಾರ ನಡೆಸಿದ ಸಾದಿಕಾ, ಅದರಲ್ಲಿ ಯಶಸ್ವಿಯೂ ಆದಳು. ಆಸಿಫಾಗಿಂತ ಹೆಚ್ಚಾಗಿ ಸಂತೋಷ ಪಟ್ಟವನು ಸಗೀರ್. ಆ ಮೇಲೆ ಅವರಿಬ್ಬರೇ ತಮ್ಮ ಬೇರುಗಳನ್ನು ಹುಡುಕುತ್ತಾ ತಮ್ಮ ಬಾಲ್ಯಾವಸ್ಥೆಗೆ ಜಾರಿದ್ದರು. ಹಾಗೆಯೇ ಆಸಿಫಾ ಚಹ ತಯಾರಿಸುವ ಸಲುವಾಗಿ ಅಡಿಗೆ ಮನೆಗೆ ಹೋದಾಗ ಅವಳೊಡನೆ ಸೇರಿದ ಸಾದಿಕಾ ರೆಹಮತ್‌ಳ ಮನೆಯ ಹಿನ್ನೆಲೆಯನ್ನು ಪ್ರಸ್ತಾಪಿಸುತ್ತಾ, ಅವಳಿಗೆ ಚಂದದ ಮಗಳಿರುವಳೆಂಬ ವಿಷಯವನ್ನು ಹೇಗೆ ಹೇಳಬೇಕೋ ಹಾಗೆ ಆಸಿಫಾಳ ಕಿವಿಗೆ ಹಾಕಿದಳು. ಅಷ್ಟೇ ಅಲ್ಲದೆ ಹೆಚ್ಚು ಒತ್ತು ಕೊಟ್ಟು ಅಜ್ರಾಳ ರೂಪ, ಗುಣ ನಡತೆ ಮತ್ತು ಕಾರ್ಯ ಕ್ಷಮತೆಯನ್ನು ಕೂಡಾ ವರ್ಣಿಸಿದ್ದಳು.

ಆಸಿಫಾಳ ಮನೆಯ ಅಂದ –ಚಂದ ನೋಡಿ ರೆಹಮತ್‌ಳಿಗಂತೂ ದಿಗ್ಭ್ರಮೆಯಾದಂತಾಯಿತು. ಒಂದು ಚೂರೂ ದೂಳಿನ ಕಣವೂ ಇಲ್ಲದಂತಹ ಭವ್ಯವಾದ ಆ ಮನೆಯ ಸೊಸೆಯಾಗಿ ಬರುವವಳು ಪುಣ್ಯ ಮಾಡಿರಬೇಕು ಎಂಬ ಅವಳ ಭಾವನೆಗೆ ಸಾದಿಕಾ ಕೂಡಾ ದನಿಗೂಡಿಸಿದಳು. ತಮ್ಮಂತೆಯೇ ಉದ್ಯೋಗನಿರತಳಾಗಿರುವ ಆಕೆ ಮನೆಯ ಕಡೆ ಇಷ್ಟೊಂದು ಗಮನವನ್ನು ಹರಿಸಲು ಹೇಗೆ ಸಾಧ್ಯ... ಮನೆಯಲ್ಲಿರುವ ಇಬ್ಬರಿಗೆ ಐದು ಬೆಡ್ ರೂಮಿನ ಮನೆ; ಅಷ್ಟೊಂದು ವಿಶಾಲವಾದ ಮನೆಗೆ ಮಾಡಿಸಿರುವ ಸದಭಿರುಚಿಯ ಫರ್ನಿಶಿಂಗ್, ಎಲ್ಲಾ ಕೊಠಡಿಗಳಲ್ಲಿಯೂ ಸೂಕ್ತ ವರ್ಣ ಸಂಯೋಜನೆಯ ಕಾರ್ಪೆಟ್... ದೇಶ ವಿದೇಶಗಳ ಅಮೂಲ್ಯ ವಸ್ತುಗಳ ಭಂಡಾರವೇ ತುಂಬಿದಂತಿತ್ತು. ಮಹಡಿ ಮೇಲಿನ ದಿವಾನಖಾನೆಯಂತೂ ಸಂಪೂರ್ಣವಾಗಿ ಈಜಿಪ್ಷಿಯನ್ ವಿನ್ಯಾಸದಲ್ಲಿ ಡೆಕೋರೇಟ್ ಆಗಿದ್ದುದನ್ನು ನೋಡಿದಂತೆಯೇ ತಮ್ಮ ಮನೆ ಗುಡಾಣದಂತಿದೆ ಎಂದು ರೆಹಮತ್‌ಗೆ ಅನಿಸಲಾರಂಭಿಸಿತು. ಅಚ್ಚಬಿಳಿಯ ಬಣ್ಣದ ಗೋಡೆಗಳ ಮೇಲೆ ಛಾವಣಿಯು ಕೂಡುವ ಕಡೆಯಲ್ಲಿ ಬಂಗಾರದ ಬಣ್ಣದ ಚಿಣಿ ಮಿಣಿ ಬಾರ್ಡರ್‌ನ ಕುಸುರಿಕೆಲಸ, ಸ್ಫಿಂಕ್ಸ್‌ನ ದೊಡ್ಡ